ಶಾಲೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸತ್ಯಾಗ್ರಹ ಪ್ರಾರಂಭ ಮಾಡುವುದಾಗಿ ತಿಳಿಸಿದರೂ ಇನ್ನೂ ಯಾವುದೇ ಕ್ರಮವಿಲ್ಲ. ಕಂಟ್ರಾಕ್ಟರ್‌ಗೆ ಕೊಟ್ಟಿದ್ದ ಅವಧಿ ಮುಗಿದಿದ್ದರೂ ಬದಲಿಸಿರುವುದಿಲ್ಲ. ಈ ಬಗ್ಗೆ ಸರ್ಕಾರ ತೀವ್ರವಾದ ಕ್ರಮ ಕೈಗೊಳ್ಳುವುದೆ?

ಶ್ರೀ ಬಿ. ಸೋಮಶೇಖರ್.—ಮಾನ್ಯ ಸದಸ್ಯರಾದ ಶ್ರೀ ನಂಜಯ್ಯನಮಠ್ ಅವರ ಹೇಳಿರತಕ್ಕಂಥ ಶಾಲಾ ಕಟ್ಟಡದ ವ್ಯಾಪ್ತಿ ಜಿಲ್ಲಾಪರಿಷತ್ತಿಗೆ ಬರುತ್ತದೆ. ಆದರೂ ಸಹಿತ ಅದು ಯಾವ ಹಂತದಲ್ಲಿದೆ ಎಂದು ತಿಳಿದು ಆದಷ್ಟು ಬೇಗ ಪೂರ್ಣಗೊಳಿಸಬೇಕೆಂದು ನಿರ್ದೇಶನವನ್ನು ನೀಡುತ್ತೇನೆ.

೧೦) ಪುತ್ತೂರು ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗೆ ಸ್ಮೃತಿ ತಪ್ಪಿಸುವ ವೈದ್ಯಾಧಿಕಾರಿಯನ್ನು ನೇಮಿಸದಿರುವುದು.

ಶ್ರೀ ವಿನಯಕುಮಾರ್ ಸೊರಕೆ .—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ, ನೆರೆಹೊರೆಯ ಸುಳ್ಯ, ಕಡಬ, ಬೆಳ್ತಂಗಡಿ, ವಿಟ್ಲ ಮತ್ತು ಪುತ್ತೂರು ತಾಲ್ಲೂಕಿನಾದ್ಯಂತ ರೋಗಿಗಳು ಬರುತ್ತಿದ್ದು, ಇಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಳೆದ ನೂರು ವರ್ಷದಿಂದ ಇದ್ದಂತಹ ಆಸ್ಪತ್ರೆಯಾಗಿದ್ದು, ಇಲ್ಲಿಯ ವ್ಯವಸ್ಥೆ ಮಟ್ಟಿಗೆ ಕೆಲವೋದು ಲೋಷದೋಷಗಳನ್ನು ಸರ್ಕಾರದ ಗಮನಕ್ಕೆ ಹಾಗೂ ಇಲಾಖೆಯ ಗಮನಕ್ಕೆ ತಂದರೂ ಸಹ ಯಾವುದೇ ರೀತಿಯ ಪರಿಹಾರ ಸಿಗದೇ ಇರುವುದರಿಂದ ಅಲ್ಲಿ ಕೆಲಸ ಮಾಡುವ ವೈದ್ಯಾಧಿಕಾರಿಗಳಿಗೆ ತುಂಬಾ ತೊಂದರೆಯಾಗಿದೆ. ಇಲ್ಲಿ ಬಂದಂತಹ ರೋಗಿಗಳಲ್ಲಿ ಆಪರೇಷನ್ ಕೇಸ್ ಇದ್ದರೆ, ಅಲ್ಲಿ ಆಪರೇಷನ್ ಗೋಸ್ಕರ ಸ್ಮೃತಿ ತಪ್ಪಿಸುವ ವೈದ್ಯಾಧಿಕಾರಿ ಇಲ್ಲದೆ ಇರುವುದರಿಂದ, ಆಪರೇಷನ್ ಮಾಡುವ ಅವಕಾಶ ಇರುವುದಿಲ್ಲ. ಇಲ್ಲಿ ಆಪರೇಷನ್ ಮಾಡದೇ ಇದ್ದರೆ ಅಂತಹ ಕೇಸನ್ನು ಮಂಗಳೂರಿಗೆ ಕೊಂಡು ಹೋಗಬೇಕಾಗುತ್ತೆ. ಹೆಚ್ಚಿನ ರೋಗಿಗಳು ಮಂಗಳೂರಿಗೆ ಹೋಗಿ ಚಿಕಿತ್ಸೆ ಪಡೆಯುವಂತಹ ಆರ್ಥಿಕ ಶಕ್ತಿ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ತುಂಬಾ ಹಿಂದಿನಿಂದಲೂ ಹೊರಗಡೆಯ ನುರಿತ ವೈದ್ಯಾಧಿಕಾರಿಗಳನ್ನು ಇಲ್ಲಿಗೆ ತರಿಸಿ ಸ್ಮೃತಿ ತಪ್ಪಿಸುವುದನ್ನು ಮಾಡುವುದು ಹಿಂದಿನಿಂದಲೂ ನಡೆದುಬಂದ ಪದ್ಧತಿ. ಆದರೆ ಇದರ ಬಗ್ಗೆ ಕೆಲವೊಂದು ಕಂತಂತ್ರಿಗಳು ಈ ವ್ಯವಸೆ ಯನ್ನೂ ಹಾಳು ಮಾಡಬೇಕು, ಆಸ್ಪತ್ರೆಗೆ ಕೆಟ್ಟ ಹೆಸರು ತರಬೇಕು ಎಂದು ಪ್ರಯತ್ನ ನಡೆಸುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳು ಕೂಡಲೇ ಪುತ್ತೂರು ಸರ್ಕಾರಿ ಆಸ್ಪತ್ರೆಗೆ ಒಬ್ಬ ಆಪರೇಷನ್‌ಗೋಸ್ಕರ ಸ್ಮೃತಿ ತಪ್ಪಿಸುವ ವೈದ್ಯಾಧಿಕಾರಿಯನ್ನು ಕೂಡಲೇ ನೇಮಿಸುವುದು ಕಾಗೂ ಆಸ್ಪತ್ರೆಗೆ ಬೇಕಾಗುವ ಕೆಲವೊಂದು ಹುದ್ದೆಗಳ ಆವಶ್ಯಕತೆಗಳ ಬಗ್ಗೆ ಹಾಗೂ ಈ ನೆರೆಯ ತಾಲ್ಲೂಕುಗಳ ಸಾರ್ವಜನಿಕರ ಬೇಡಿಕೆ ಏನು ಎಂದರೆ ಕಳೆದ ಕೆಲವು ವರ್ಷಗಳ ಹಿಂದಿನಿಂದ ಇದೆ, ನೂರು ಬೆಡ್‌ಗಳ ಆಸ್ಪತ್ರೆಯಾಗಬೇಕು ಎಂಬುದನ್ನು ಮಾನ್ಯ ಮಂತ್ರಿಗಳು ಈಡೇರಿಸಿ ಕೊಡಬೇಕಾಗಿ ತಮ್ಮ ಮುಖಾಂತರ ಒತ್ತಾಯಪಡಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಪುತ್ತೂರು ಆಸ್ಪತ್ರೆಗೆ ಬೇಕಾಗಿರತಕ್ಕಂಥ ವೈದ್ಯಾಧಿಕಾರಿಗಳನ್ನು ಕೊಡಲಾಗಿದೆ. ಇನ್ನು ತಾಲ್ಲೂಕುಗಳಲ್ಲಿ ಇರತಕ್ಕ ಆಸ್ಪತ್ರೆಗಳಲ್ಲಿ ೫೦ ಬೆಡ್ ಇರತಕ್ಕ ವ್ಯವಸ್ಥೆ ಮಾಡಿದ್ದೇವೆ, ಇದನ್ನು ನೂರು ಬೆಡ್‌ಗಳ ಆಸ್ಪತ್ರೆಯನ್ನಾಗಿ ಮಾಡಲು, ಹಂತ ಹಂತವಾಗಿ ಹಾಗೂ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ೧೦೦ ಹಾಸಿಗೆ ಇರತಕ್ಕ ವ್ಯವಸ್ಥೆಗೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

೧೧) ಶಿವಮೊಗ್ಗ ಜಿಲ್ಲೆಯಲ್ಲಿ ಬಿತ್ತನೆಯ ಬೀಜಗಳಿಂ ದೊರಕದೆ ತೊಂದರೆಯಾಗಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕೆಲವು ಭಾಗದಲ್ಲಿ ೨-೩ ಬಾರಿ ಮಳೆ ಬಿದ್ದಿದ್ದು ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಇನ್ನು ೫-೬ ದಿವಸದೊಳಗೆ ಬಿತ್ತನೆ ಕೆಲಸ ಪ್ರಾರಂಭಿಸುವವರಿದ್ದು, ಕೃಷಿ ಇಲಾಖೆಯಲ್ಲಿ ಬಿತ್ತನೆಗೆ ಬೇಕಾದ ಹತ್ತಿಬೀಜ, ಜವಾರ್, ಸೂರ್ಯಕಾಂತಿ ಅಗತ್ಯಕ್ಕೆ ಬೇಕಾದಷ್ಟು ಇಲ್ಲದೆ, ವಿಶೇಷವಾಗಿ ಹತ್ತಿಬೀಜ ಸಿಗುತ್ತಿಲ್ಲ. ಈವರೆಗೆ ವಿತರಣೆ ಕೆಲಸ

ಪ್ರಾರಂಭಿಸದೆ ರಾಜ್ಯದ ರೈತರು ಬಿತ್ತನೆ ಬೀಜ ಸಿಗದೆ ಬಹಿರಂಗ ಮಾರುಕಟ್ಟೆಯಲ್ಲಿ ಕಳಪೆ ಬೀಜ ಹೆಚ್ಚಿನ ಬೆಲೆಗೆ ಪಡೆದು ಮೋಸ ಹೋಗುತ್ತಿದ್ದಾರೆ. ಆದ್ದರಿಂದ ರಾಜ್ಯದ ರೈತರಿಗೆ ವಿತರಣೆ ಮಾಡಲು ಯಾವ ಯಾವ ಬಿತ್ತನೆ ಬೀಜ ಎಷ್ಟಿದೆ, ಈಗಾಗಲೇ ಕೃಷಿ ಇಲಾಖೆಯಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಸ್ಟಾಕ್ ಇವೆ, ವಿತರಣೆ ಕೆಲಸ ಕೃಷಿ ಇಲಾಖೆಯ ಮೂಲಕ ಯಾವಾಗ ಪ್ರಾರಂಭಿಸಲಾಗುವುದು ಎಂಬ ವಿಷಯ ತಿಳಿಯಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಬೀಜ ವಿತರಣೆ ಕೆಲಸ ನಡೆಯುತ್ತಿದೆ, ಇಡೀ ಕರ್ನಾಟಕ ರಾಜ್ಯದಲ್ಲಿ ೩,೨೪.೭೦೮ ಕ್ವಿಂಟಾಲ್ ಬೀಜ ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಸರ್ಟಿಫೈಡ್ ಸೀಡ್ಸ್ ೮೭ ಸಾವಿರ ಕ್ವಿಂಟಾಲ್ ಬೇಕಾಗಬಹುದು. ಸೀಡ್ ಕಾರ್ಪೊರೇಷನ್‌ನಿಂದ, ಆಯಿಲ್ ಸೀಡ್ ಕಾರ್ಪೊರೇಷನ್‌ನಿಂದ ಮತ್ತು ಬೇರೆ ಬೇರೆ ಖಾಸಗಿ ಸಂಸ್ಥೆಗಳಿಂದ ಹಾಗೂ ಬೀಜ ನಿಗಮದಿಂದ ಈಗಾಗಲೇ ೨ ಲಕ್ಷ ಕ್ವಿಂಟಾಲ್ ಬೀಜ ವಿತರಣೆ ಮಾಡಲಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಜೋಳ ೪೮೫ ಕ್ವಿಂಟಾಲ್, ಮುಸುಕಿನ ಜೋಳ ೧೭೦ ಕ್ವಿಂಟಾಲ್, ರಾಗಿ ೨೮೫ ಕ್ವಿಂಟಾಲ್, ಭತ್ತ ೨೬೭೦ ಕ್ವಿಂಟಾಲ್, ಗೋಧಿ ೩೫ ಕ್ವಿಂಟಾಲ್, ದ್ವಿದಳಧಾನ್ಯ ೫೧೦ ಕ್ವಿಂಟಾಲ್ ಸನ್ ಫ್ಲವರ್ ೨೭೫ ಕ್ವಿಂಟಾಲ್, ಸೇಂಗಾ ೩೦೦ ಕ್ವಿಂಟಾಲ್, ಹತ್ತಿ ೩೨೩.೨೫ ಕ್ವಿಂಟಾಲ್ ಬೀಜ ಈಗಾಗಲೇ ಈ ಜಿಲ್ಲೆಯಲ್ಲಿ ದಾಸ್ತಾನು ಮಾಡಲಾಗಿದೆ. ಹಾಗೂ ಈ ವಿಚಾರದಲ್ಲಿ, ಇನ್ನು ಏನಾದರೂ ಸಮಸ್ಯೆ ಬಂದರೆ, ಆ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ.

೧೨ ತುಮಕೂರು ಜಿಲ್ಲೆಯಲ್ಲಿ ಮುಂಗಾರು ಬಿತ್ತನೆಗೆ ಬೀಜಗಳ ವಿತರಣೆ ಬಗ್ಗೆ

ಶ್ರೀ ಬಿ. ಲಕ್ಕಪ್ಪ.— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಬಹುವರ್ಷಗಳಿಂದ ಬಾರದೇ ಇದ್ದ ಭರಣಿ ಮಳೆ ಈ ವರ್ಷ ಬಂದು ಮುಂಗಾರು ಬಿತ್ತನೆಗೆ ಅಗತ್ಯ ಮತ್ತು ಲಾಭದಾಯಕವಾದ ಭರಣಿ ಮಳೆ ತುಮಕೂರು ಜಿಲ್ಲೆಯಲ್ಲಿ ವ್ಯಾಪಕವಾಗಿ ಬಂದಿರುತ್ತದೆ. ಆದರೆ ಬಿತ್ತನೆಗೆ ಅಗತ್ಯವಾದ ಜೋಳ, ಹೆಸರು ತೊಗರಿ ಉದ್ದಿನ ಬಿತ್ತನೆ ಬೀಜ ಸಿಗುತ್ತಿಲ್ಲ. ಯಾವುದೇ ಕೃಷಿ ಉಪ ನಿರ್ದೇಶಕರ ಆಫೀಸಿನಲ್ಲಿ ಸಿಗುತ್ತಿಲ್ಲ. ರೈತರು ಬಿತ್ತನೆ ಬೀಜಕ್ಕಾಗಿ ಪರದಾಡುತ್ತಿದ್ದಾರೆ ಆದ್ದರಿಂದ ರೈತರ ಬಿತ್ತನೆ ಬೀಜದ ಅವಶ್ಯಕತೆಯನ್ನು ಆರಿತು ರಾಜ್ಯ ಬೀಜ ನಿಗಮದಿಂದ ಸರ್ಕಾರ ತಕ್ಷಣ ಅವಶ್ಯಕ ವಿವಿಧ ಬಿತ್ತನೆ ಬೀಜಗಳನ್ನು ತಕ್ಷಣ ಭೂಮಿಯ ಹದ ಆರುವ ಮುನ್ನ ಒದಗಿಸಲು ಕ್ರಮ ತೆಗೆದುಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ತುಮಕೂರು ಜಿಲ್ಲೆಯಲ್ಲಿ ಈ ವರ್ಷ ೧೭ ೧೧೫ ಕ್ವಿಂಟಾಲ್ ಬೀಜ ಬೇಕಾಗಬಹುದು ಎಂದು ಅಂದಾಜು ಮಾಡಿದ್ದೇವೆ. ಇದರ ಪೈಕಿ ಖಿರಾಫ್‌ಗಾಗಿ ೧೪.೭೬೫ ಕ್ವಿಂಟಾಲ್ ಬೀಜ ಬೇಕಾಗಬಹುದು ಎಂದು ಅಂದಾಜು ಮಾಡಿದ್ದೇವೆ. ಆ ಪ್ರಕಾರ ಬೀಜ ನಿಗಮದ ಮೂಲಾಂತರ ೧.೨೭೦ ಕ್ವಿಂಟಾಲ್ ಬೀಜ ದಾಸ್ತಾನು ಆಗಿದೆ ವಿತರಣೆ ಕಾರ್ಯ ನಡೆಯುತ್ತಿದೆ, ಅದೇ ಪ್ರಕಾರ ಬೇರೆ ಬೇರೆ ಖಾಸಗಿ ಸಂಸ್ಥೆಗಳಿಂದ ಈ ಬೀಜದ ಬೇಡಿಕೆಯನ್ನು ಪೂರೈಸುವುದಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದೇನೆ. ಕಾಟನ್ ಸಿ.ಹೆಚ್. ೫ ಸಮಸ್ಯೆ ಇದೆ. ಇದನ್ನು ಒಪ್ಪಿಕೊಳ್ಳುತ್ತೇನೆ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

೧೩ ಮೈಸೂರಿನಲ್ಲಿರುವ ಕೀರ್ತಿ ಫೈನಾನ್ಸ್‌ನ ಠೇವಣಿದಾರರಿಗೆ ಅನ್ಯಾಯವಾಗಿರುವುದರ ಬಗ್ಗೆ

ಶ್ರೀ ಪಿ.ಎಂ. ಚಿಕ್ಕಬೋರಯ್ಯ. — ಮೈಸೂರಿನ ಕೀರ್ತಿ ಫೈನಾನ್ಸ್ ಠೇವಣಿದಾರರಿಗೆ ವಂಚನೆ ಮಾಡಿದ್ದಾರೆ, ಹಣ ಪಡೆದವರಿಗೆ ಆಸಲೂ ಇಲ್ಲ. ಬಡ್ಡಿಯೂ ಇಲ್ಲ ಎಂಬ ಪರಿಸ್ಥಿತಿ ಒದಗಿದೆ. ಇದರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ಕೈಗೊಂಡು ಈ ಸಂಸ್ಥೆಯಲ್ಲಿ ಹಣ ತೊಡಗಿಸಿದವರಿಗೆ ಹಣ ವಾಪಸ್ಸು ಕೊಡಿಸಲು ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,— ಮೈಸೂರಿನ ಕೀರ್ತಿ ಫೈನಾನ್ಸ್ ಕಾರ್ಪೊರೇಷನ್‌ನವರು ಎಲ್ಲರಿಂದ ಹಣ ವಸೂಲ್ಮಾಡಿ, ಹಣ ಪಡೆದವರಿಗೆ ಆಸಲೂ ಇಲ್ಲ, ಬಡ್ಡಿಯೂ ಇಲ್ಲ ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಇದರ ಬಗ್ಗೆ ನಾನು ಉತ್ತರ ತರಿಸಿ ಕೊಡುತ್ತೇನೆ.